ಕೋಲಾರ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಆಫಿಸಿನಿಂದ.

ತಾರೀಖು 27ನೇ ನವಂಬರ್ 1889ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿನಲ್ಲಿ ಈಚಿಗೆ ಯೆರ್ಪಟ್ಟಿರುವ ಸಹಾಯ ನಿಧಿಗಳೆಂಬ ಕೃತ್ರಿಮವಾದ ಕಂಪೆನಿಗಳಲ್ಲಿ ಜನಗಳು ಷೇರುಗಳನ್ನ ಹಾಕಿ ಮೋಸ ಹೋಗದಹಾಗೆ ಯಚ್ಚರಗೊಂಡಿರಲು 1889ನೇ ಇಸವಿ ಜೂಲೈ 14ನೇ ತಾರೀಖಿನ ಒಂದು ಇಸ್ತಿಹಾರ್‌ನಾಮೆಯು ಅದೇ ಮಾಹೆ 22ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದ 217ನೇ ಪುಟದಲ್ಲಿ ಛಾಪಿಸಲ್ಪಟ್ಟಿರುವದು ಸರಿಯಷ್ಟೆ.

ಈಚಿಗೆ ಅಂದರೆ ಕಳದ ಅಕ್ಟೋಬರ್ ಮಾಹೆಯಲ್ಲಿ ಮೈಸೂರಲ್ಲಿ ನಡದ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಈ ಡಿಸ್ಟ್ರಿಕ್ಟಿನ ಮೆಂಬರುಗಳು ಮೇಲೆ ವಿವರಿಸಿ ಯಿರುವಂಥಾ ಸಹಾಯ ಕಂಪೆನಿಗಳಿಂದ ಪ್ರಜೆಗಳಿಗೆ ಬಹಳ ಹಾನಿ ವುಂಟಾಗುವದ್ದರಿಂದ ಅವುಗಳನ್ನ ಮವಿಕೂಫ್ ಮಾಡಿಸಬೇಕೆಂದು ಕೇಳಿಕೊಂಡದ್ದರ ಮೇಲೆ ದಿವಾಣ ಸಾಹೆಬರವರು ಅಪ್ಪಣೆ ಕೊಡಿಸಿದ ವುತ್ತರವನ್ನ ಸಮಸ್ತ ಜನಗಳ ತಿಳುವಳಿಕೆಗೋಸ್ಕರ ಇದರಡಿ ಪ್ರಕಟಿಸಿ ಯಿರುತ್ತೆ.

"ಈ ಕಂಪೆನಿಗಳಿಗೆ ಸಂಬಂಧಪಟ್ಟ ಸಂಗತಿಗಳು ಸ್ಥಳ ಅಧಿಕಾರಿಗಳಿಂದ ಗವರ್ಮೆಂಟಿನವರ ನೋಟಿಸಿಗೆ ತರಲ್ಪಟ್ಟಿರುತ್ತವೆ; ಕಂಪೆನಿಯವರು ಹೆಚ್ಚಾದ ಮತ್ತು ಅನ್ಯಾಯವಾದ ಲಾಭವನ್ನ ಕೊಡುವದಾಗಿ ಹೇಳತಕ್ಕದ್ದನ್ನ ಜನರು ಆಲೋಚನೆ ಯಿಲ್ಲದೆ ಅಂಗೀಕರಿಸಬಾರದೆಂದು ಅವರಿಗೆ ಯೆಚ್ಚರಿಸಲು ಕೆಲವು ಮಟ್ಟಿಗೆ ಪ್ರಯತ್ನಗಳು ನಡಿಸಲ್ಪಟ್ಟವು, ಈ ಕಂಪೆನಿಗಳ ಆಳತನಗಳನ್ನು ಕುರಿತು ವಿಚಾರತ್ವೇನ ರಿಪೋರ್ಟು ಮಾಡಲು ಬಂದು ಕಮಿಟಿ ಯೇರ್ಪಡಿಸಿ ಆದಕ್ಕೆ ಮೆ|| ತಂಬುಚಟ್ಟಿಯವರನ್ನ ಪ್ರೆಸಿಡೆಂಟರನ್ನಾಗಿ ನೇಮಿಸಿ ಯಿರುತ್ತೇವೆ, ಪ್ರಜೆಗಳನ್ನ ಮೋಸಗೊಳಿಸುವ ಕಂಪೆನಿಗಳನ್ನ ತಗ್ಗಿಸಲು ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಯೆತ್ನಿಸುವರು, ಆದರೆ ವಿಚಾರವಿಲ್ಲದೆ ನಂಬಿಬಿಡುವ ಕೆಲವು ಜನಗಳಿಗೆ ಅವರ ಸ್ವಯಂ ಕೃತಾಪರಾಧದಿಂದ ವುಂಟಾಗುವ ಫಲಗಳನ್ನು ತಪ್ಪಿಸಲು ಅನೇಕವೇಳೆ ಅಸಾಧ್ಯವಾಗುತ್ತೆ."

"ಯಿಂಡಿಯನ್ ಕಂಪೆನೀಸ್ ಆಕ್ಟು 104ನೇ ಸೆಕ್ಷನ್ ಅನುಸರಿಸಿ ಆಯಾಯ ಕಂಪೆನಿಗೆ ಸಂಬಂಧಪಟ್ಟಯಾವ ಮನುಷ್ಯನಾದರೂ ಅದನ್ನ ಸಿವಿಲ್ ಕೋರ್ಟು ದ್ವಾರಾ ಮವಿಕೂಫ್ ಮಾಡಿಸಲು ಆಸ್ಪದವಿರುತ್ತೆ."

"ವಿಶೇಷವಾಗಿ ದ್ರವ್ಯವನ್ನ ಜಮಾಯಿಸಿ ಆ ಪೈಕಿ ಹೆಚ್ಚು ಭಾಗವನ್ನ ಬ್ಬಂದಿ ಖರ್ಚಿಗೋಸ್ಕರ ಉಪಯೋಗಿಸುತ್ತಾ ಮೂಲಧನವನ್ನ ವೃದ್ಧಿಪಡಿಸಲು ಯಾವ ಪ್ರಯತ್ನವನ್ನು ಮಾಡದೆ ಯಿರುವ ಕಂಪೆನಿಗಳು ಅವುಗಳಲ್ಲಿ ಷೇರ್‌ದಾರ್ರನ್ನಿಸಿ ಕೊಂಡಿರುವ ಅನೇಕ ಜನಗಳಿಗೆ ಕೊಡಬೇಕಾದ ಹಣವನ್ನು ಖಾವತಿಮಾಡಲಾರದೆ ತಪ್ಪಿಹೋಗತಕ್ಕದ್ದು ನಿಸ್ಸಂದೇಹವಾದ ಅಂಶವೆಂಬುವದನ್ನ—ಕುರಿತು ನೀವು ಮತ್ತು ನಿಮ್ಮ ಸ್ನೇಹಿತರು ಸಹ ಸದರೀ ಕಂಪೆನಿಗಳಿಗೆ ಸಂಬಂಧಪಟ್ಟ ಜನಗಳಿಗೆ ಜನ್ಮಾಗಿ ತಿಳಿಯಹೇಳಿ ಅವರಿಗೆ ತಕ್ಕ ವ್ಯವಹಣೆಯನ್ನು ಮಾಡತಕ್ಕದ್ದಾಗಿ ಯಿದೆ."

"ಹೇಳಿದಮಾತನ್ನ ನಂಬುವದಕ್ಕೆ ಮುಂಚೆ ಪ್ರಜೆಗಳು ವಿವೇಕದಿಂದ ಆಲೋಚಿಸಿ ಕಂಪೆನಿಗಳಿಗೆ ಸಂಬಂಧಪಟ್ಟ ಜನಗಳು ತಕ್ಕ ಯತ್ನಗಳನ್ನ ನಡಿಸಿದ್ದೇ ಆದರೆ ಈ ಕಂಪೆನಿಗಳು ಶೀಘ್ರವಾಗಿ ಲಯ ಹೊಂದುವವು."

ಮೇಲ್ಕಂಡ ಬುದ್ಧಿವಾದವನ್ನು ಜನಗಳು ಕೈಕೊಂಡು ಕಂಪೆನಿಯವರ ಮೋಸಕ್ಕೆ ವಳಪಡದಿರಲು ಈ ಮೂಲಕ ಪುನಹ ಯೆಚ್ಚರಿಸಿ ಯಿರುತ್ತೆ.

ಅನೇಕ ಕಂಪೆನಿಯವರು ಭೂರೀ ಮೊಬಲಗನ್ನ ಡಿಸ್ಟ್ರಿಕ್ಟು ಮಜಕೂರ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಡಿಪಾಜಿಟ್ ಯಿಟ್ಟಿದ್ದರ್ದನ್ನ ಸರಕಾರ ಬ್ಯಾಂಕುಗಳಲ್ಲಿ ಯಿಡತಕ್ಕದ್ದಲ್ಲವೆಂದು ಗವರ್ಮೆಂಟಿನವರು ಅಪ್ಪಣೆ ಮಾಡಿದ್ದರ ಮೇಲೆ ಸದರೀ ಮೊಬಲಗನ್ನ ಸೇವಿಂಗ್ಸ್ ಬ್ಯಾಂಕುಗಳಿಂದ ನಿವರ್ತಿಸಲು ಹುಕುಂಗಳು ಕೊಡಲ್ಪಟ್ಟಿರುತ್ತವೆ, ಷೇರ್‌ದಾರ್ರುಗಳು ಅಥವಾ ಇತರ ಸಂಬಂಧಪಟ್ಟ ಜನರು ಸದರೀ ಮೊಬಲಗನ್ನ ಕಾಪಾಡಿಕೊಳ್ಳಲು ಅವಶ್ಯಕವಿದ್ದರೆ ಅದಕ್ಕೆ ತಕ್ಕ ಪ್ರಯತ್ನಗಳು ಮಾಡಿಕೊಳ್ಳಬಹುದು.

ಅಬ್ದುಲ್‌ರಹಿಮ್ಮಾನ್,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಡಿವಿಜ್ಞ.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಡಿಕಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರಲ್ಲಿ ಹೊಸದಾಗಿ ತಯಾರಾಗತಕ್ಕ ರೆವಿನ್ಯೂ ಸರ್ವೆ ಆಫಿಸ್ ಕಾಮಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತ್ತುಗಳನ್ನು ಬೆಂಗಳೂರು ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಜನವರಿ 6ನೇ ತಾರೀಖು ಪರಯಂತರ ಹಿಡಿಯಲ್ಪಡುವದು.

ಸುಮಾರು ಆಂಮಾಣ ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿದೆ, ಈ ಪರಿಮಾಣವು ಗೊತ್ತಾದ್ದಲ್ಲಾ, ಕಾಮಗಾರಿಯು 1891ನೇ ಇಸವಿ ಜೂನ್ ಆಖೈರಿಗೆ ಪೂರೈಸತಕ್ಕದ್ದು.

2. ಸ್ಯಾಂಕ್ಷನ್ ಅಂದಾಜು ಮತ್ತು ಪರತ್ತು ಇತರ ಸಂಗತಿಗಳನ್ನು ಸಹ ದಿವಿ 11 ಘಂಟೆ ಲಗಾಯತು ಸಾಯಂಕಾಲ 5 ಘಂಟೆ ವರಿಗೆ ಬೆಂಗಳೂರು ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಒಂದು ಪಟ್ಟಿ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟ್ ಮೂಲಕವಾಗಲಿ ನಗದಾಗಲಿ 100 ರೂಪಾಯಿ ಡಿಪಾಜಿಟನ್ನು ವಡಗೂಡಿ ಯಿರಬೇಕು. ಮತ್ತು ಬೆಂಗಳೂರಲ್ಲಿ ಹೊಸದಾಗಿ ತಯಾರಾಗುವ ರವಿನ್ಯೂ ಸರ್ವೆ ಆಫಿಸ್ ಕಾವಲುಗಾರಿ ದರಖಾಸ್ತುಯಂತ ಲಿಫಾಫ್ಹೆ ಮೇಲೆ ಬರದುಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನು ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನು ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರಧಾಗಿ ಯಿಧೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನು ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನು ಬರದುಕೊಡತಕ್ಕದ್ದು ಅವಶ್ಯವಾಗಿ ಯಿಧೆ. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ವೊಬಲಗನ್ನು ಹೋಗಲಾಡಿಸಿ ಕೊಳ್ಳುವನು.

7. ಯಾವ ದರಖಾಸ್ತು ಮಂಜೂರ್ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಎಗ್ಜಿಕ್ಯೂಟಿವ್ ಇಂಜನಿಯರವ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಐಯಿಂದ ಚಿಕಟಾಯಿಸಲ್ಪಡುವದು.

8. ದರಖಾಸ್ತುಗಳ ಪೈಕಿ ಒಂದು ದರಖಾಸ್ತು ಮಂಜೂರಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.

ಬಾಬುವಾರು.	ಅಂದಾಜಿಗೆ.	ದರ.	ಪರಿಮಾಣ.	ಷರಾ
ಪಾಯಬೋದೀ ಕೆಲಸ	ಸಲೆಗಜ		906	
ಕಲ್ಲು ಸುಂಣದಿಂದ ಪಾಯಾಭರ್ತಿ ಬೇಸ್ ಮಟ್ಟ	ಸಲೆಅಡಿ		16290	
ಇಟ್ಟಿಗೆ ಸುಂಣದಿಂದ ಗೋಡೆ	ಡಿಟೋ		26608	
ಡಿಟೋ ಕಮ್ಮಾ ಕೆಲಸ	ಡಿಟೋ		2430	
ಸದರೀ	ಡಿಟೋ		513	
ಸುಂಣದಿಂದ ಗಿಲಾವು	ಚದರ		469·84	
ಸುಂಣದಿಂದ ಸಂಪುಗಾರೆ	ಡಿಟೋ		17·10	
ಸುಂಣ ಬಳಿಯುವದು	ಡಿಟೋ		196·90	
ಬಂಣ ಬಳಿಯುವದು	ಡಿಟೋ		272·94	
ಕಾರ್ನೀಸ್ (ವಂದೂವರೆ ಅಡಿ ಹೊರಡಿಸುವದು)	ಲಾಂಬಿ ಅಡಿ		810	
ಡಿಟೋ (ವಂದು ಅಡಿ ಡಿಟೋ) ..	ಡಿಟೋ		320	
ಕಂಭಗಳ ತಲೆಸುತ್ತು ಕಾರ್ನೀಸ್	ಡಿಟೋ		208	
ಜನಲು ಸುತ್ತು ತೆರಪೆ	ಡಿಟೋ		10·44	
ಸಜ್ಜುಗಾರೆ	ಚದರ ಅಡಿ		84·54	
ತಾರಸು	ಡಿಟೋ		217·74	
ತ್ಯಾಗದ ಮರದ ಕೆಲಸ	ಸಲೆಅಡಿ		2062	
ಮೆಟ್ಟು ಚಪ್ಪಡಿ	ಚದರಡಿ		128	
ಕದಗಳು	ಡಿಟೋ		832	
ಜನಲುಗಳು	ಡಿಟೋ		1120	
ಮೇಲೆ ಚಿಕ್ಕ ಜನಲುಗಳು	ಡಿಟೋ		336	
ಕನ್ನಡಿ ಅರ್ಧ ಕಮ್ಮಾ ಜನಲುಗಳು	ಡಿಟೋ		416	
ಬಿದರ ಚಾವಿ ಬೆನ್ನು ತಿಪ್ಪೆಯಿಂದ ಮಾಡಿದ್ದು	ಡಿಟೋ		71·13	
ಮರದೆಂಣೆ ಕೆಲಸ				
ಜಿಂಕ್ ಕೊಳಾಯಿಗಳು				

ಟಿ. ಆರ್. ಸ್ಕಾಲ್ಡ್‌ವೆಲ್,
ಎಗ್ಜಿಕ್ಯೂಟಿವ್ ಇಂಜನಿಯರ್.